**Government of Karnataka**
**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 405/2024 |

ದಿನಾಂಕ 25-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 2 ಪ್ರಾಸಾಃ 4

| | |
|---|---|
| ಹೆಸರು | ಶಿವಪ್ಪ |
| ತಂದೆಯ ಹೆಸರು | ಭೀಮಪ್ಪ |
| ವಯಸ್ಸು | 45 ವರ್ಷ |
| ಉದ್ಯೋಗ | ಗ್ರಾಮಸಹಾಯಕ |
| ವಾಸಸ್ಥಳ | ವಗಡಂಬಳಿ ತಾ: ದೇವದುರ್ಗ |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ**

ಆರೋಪಿ ಪರಿಚಯ ಇಲ್ಲ. ಸಾಕ್ಷಿಯು ಮರಳಿನ ದಾಳಿ ಮತ್ತು ದಾಸ್ತಾನು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ:ಪಿ-2 ಎಂದು ಗುರುತಿಸಲಾಯಿತು. ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ ಪಿ 2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 2 ವರ್ಷದ ಹಿಂದೆ ಚಾಸಾ-1 , 3 ರಿಂದ 5 ರವರು ಸ್ಥಳಕ್ಕೆ ಹೋಗುವುದಾಗಿ ತಿಳಿಸಿದ್ದು ಅವರ ಜೊತೆ ಸ್ಥಳಕ್ಕೆ ಹೋಗಿರುತ್ತೇನೆ. ಸ್ಥಳಕ್ಕೆ ಹೋಗಿ ನೋಡಿದಾಗ, ಗೋಪಾಳಪುರ ಗ್ರಾಮದ ಜಮೀನು ಸ ನಂ 35 ಇದರಲ್ಲಿ ಮರಳು ಕುಪ್ಪೆ ಕುಪ್ಪೆ ಹಾಕಿರುವುದು ಕಂಡು ಬಂದಿರುತ್ತದೆ. ಕಂದಾಯ ಅಧಕಾರಿಗಳು ಕುಂಪೆ ಹಾಕಿರುವ ಮರಳಿನ ಸರ್ವೆ ನಂಬರ್ ವಿಚಾರಿಸಲಾಗಿ ಸರ್ವೆ ನಂಬರ್ 35/2/2, ಜಮೀನು ಇದ್ದು ಅದರ ಪಟ್ಟೆದಾರನ ಹೆಸರು ಶಿವಪ್ಪ ತಂದೆ ಡಾಕಪ್ಪ ಅಂತಾ ಗೊತ್ತಾಗಿರುತ್ತದೆ. ಮರಳನ್ನು ಅಮರೇಶ ತಂದೆ ದುರಗಯ್ಯ ಎನ್ನುವವರು ಶೇಖರಣೆ ಮಾಡಿಟ್ಟಿರುತ್ತಾರೆಂದು ಚಾಸಾ-4 ರವರು ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿ ನಾನು ಪಂಚರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಮಾಡಿದರು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಪ್ರಾರ್ಥಿಸುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಸ.ಸ.ಅ. ರವರಿಂದ:-**

ದಿನಾಂಕ: 15-05-2024 ರಂದು ಸ್ಥಳದಲ್ಲಿ 800 ಮೆಟ್ರಿಕ್ ಟನ್ ನಷ್ಟು ಅಕ್ರಮ ಮರಳನ್ನು ಶೇಖರಿಸಿಟ್ಟಿರುತ್ತಾರೆ ಅದರ ಅಂದಾಜು ಕಿಮ್ಮತ್ತು ರೂ 312000/- ಆಗುತ್ತಿತ್ತು ಎಂದರೆ ಸರಿ. ಪಂಚನಾಮೆಯನ್ನು ಮಧ್ಯಾಹ್ನ 3-00 ರಿಂದ 3-30 ಗಂಟೆಗೆ ಮಾಡಿದರು ಎಂದರೆ ಸರಿ.

**ವಾಟೀ ಸವಾಲು: ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದ:**

1. ನನಗೆ ಓದಲು ಬರೆಯಲು ಬರುವುದಿಲ್ಲ. ಚಾಸಾ-1, 4 ರಿಂದ 6 ನಿಮ್ಮ ಮೇಲಾಧಿಕಾರಿಗಳಾಗಿರುತ್ತಾರೆ ಅವರು ಹೇಳಿದಂತೆ ನೀವು ಕೆಲಸ ಮಾಡಬೇಕಾಗುತ್ತದೆ ಎಂದರೆ ಸರಿ. ಪಂಚನಾಮೆಯಲ್ಲಿ ಏನೂ ಬರೆದಿದ್ದಾರೆಂದು ಗೊತ್ತಿಲ್ಲ ಅದಕ್ಕೆ ಸಹಿ ಮಾಡು ಎಂದ ಕಾರಣಕ್ಕೆ ಸಹಿ ಮಾಡಿದ್ದೀರಿ ಎಂದರೆ ಸರಿ. ದೇವದುರ್ಗದಿಂದ ಗೋಪಾಳಪುರ ಯಾವ ದಿಕ್ಕಿಗೆ ಬರುತ್ತದೆಂದು ನನಗೆ ಗೊತ್ತಿಲ್ಲ. ನಾನು ವಗಡಂಬಳಿಯಲ್ಲಿದ್ದೆ ಚಾಸಾ-4 ರವರು ದೂರುವಾಣಿ ಕರೆ ಮಾಡಿ ನನಗೆ ಕರೆದಿರುತ್ತಾರೆ. ಗುನ್ನೆ ಸ್ಥಳದ ಚಕ್‌ಬಂದಿ ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಚಾಸಾ-1 ರಿಂದ 4 ಇವರನ್ನು ಹೊರತುಪಡಿಸಿ ಊರಿನವರು ಯಾರು ಇರಲಿಲ್ಲ. ಆರೋಪಿತನು ಮರಳನ್ನು ಸ್ಥಳದಲ್ಲಿ ಶೇಖರಣೆ ಮಾಡಿಟ್ಟಿರುವುದು ನಾನು ಕಣ್ಣಾರೆ ನೋಡಿರುವುದಿಲ್ಲ ಆದರೆ ಅಧಿಕಾರಿಗಳು ತಿಳಿಸಿರುತ್ತಾರೆ. ಆರೋಪಿತನು ಯಾವ ವಾಹನದಿಂದ ಮರಳನ್ನು ಶೇಖರಣ ಮಾಡಿರುತ್ತಾನೆ ಎಂದರೆ ಸಾಕ್ಷಿಯು ಟ್ರ್ಯಾಕ್ಟರ್ ನಿಂದ ಮಾಡಿದ್ದಾನೆ ಎಂದು ಹೇಳುತ್ತಾನೆ ಆ ಟ್ರ್ಯಾಕ್ಟರ್ ಯಾರದು ಎಂದು ನನಗೆ ಗೊತ್ತಿಲ್ಲ. ದಿನಾಂಕ: 15-05-2024 ರಂದು ಮಧ್ಯಾಹ್ನ 3-00 ರಿಂದ 3-30 ಗಂಟೆಯವರೆಗೆ ಚಾಸಾ-1 ರಿಂದ 4 ರವರ ಸಮಕ್ಷಮ ಗೋಪಾಳಪುರ ಗ್ರಾಮದ ಸ ನಂ 35 ರಲ್ಲಿ ಮರಳನ್ನು ಅಕ್ರಮವಾಗಿ ದಾಸ್ತಾನು ಇಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆ ದಿನ ನಾನು ಎರಡು ಸಹಿ ಮಾಡಿರುತ್ತೇನೆ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ